ಕರ್ನಾಟಕ ಸರ್ಕಾರ (ಪಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4
(ಸಿವಿಲ್)

**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ.**

ಎಸ್.ಸಿ.ಸಂಖ್ಯೆ: 54/2008

ಪ್ರಾಸಾ 04

ಚಾಸಾ 01

ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕಃ 29.09.2018

| | | |
|---|---|---|
| ಸಾಕ್ಷಿಯ ಹೆಸರು | : | ಲೋಕೇಶ್ವರ |
| ತಂದೆ/ಗಂಡನ ಹೆಸರು | : | ಸಿದ್ದರಾಮಯ್ಯ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ನಿವೃತ್ತ ಎಸಿಪಿ |
| ವಾಸಸ್ಥಳ | : | ತಿಪಟೂರು |

ಃಅಪರಾಧ ಪ್ರಕ್ರಿಯಾ ಸಂಹಿತೆ ಕಲಂ 299 ಅಡಿಯಲ್ಲಿ ಸಾಕ್ಷಿಯ ವಿಚಾರಣೆಃ

ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದಃ

ನಾನು ಜನವರಿ 2002 ರಿಂದ ನವೆಂಬರ್ 2003 ರವರೆಗೂ ಗೌರಿಬಿದನೂರಿನ ವೃತ್ತದ ಪೊಲೀಸ್ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 20.03.2002 ರ ಬೆಳಿಗ್ಗೆ ನಗರ ಪೊಲೀಸ್ ಠಾಣೆಯ ಮೊ.ಸಂ.49/2002 ಇದರ ವಿಚಾರಣೆಯಲ್ಲಿದ್ದಾಗ ನನಗೆ ಬಂದ ಖಚಿತ ಮಾಹಿತಿಯ ಮೇರೆಗೆ ಗೌರಿಬಿಸಿದನೂರು ನಗರದ ಹಿಪ್ಪಾರ್ ಕಾಲೋನಿ ಬಳಿ ಪ್ರೇಮ್‌ರಾಜ್ ಎಂಬುವವರಿಂದ ಮೇಲೆ ತಿಳಿಸಿದ ಮೊಕದ್ದಮೆಗೆ ಸಂಬಂಧಿಸಿದಂತೆ ಹಣ ಪಡೆಯಲು

ಫೋಟೀಸ್ ಕಾರಿನಲ್ಲಿ 3 ಜನ ಬಂದಿದ್ದು ನಮ್ಮನ್ನು ನೋಡಿದ ಅವರು ಅಲ್ಲಿಂದ ತಪ್ಪಿಸಿಕೊಂಡು ಕಾರು ಸಮೇತ ಮಂಚೇನಹಳ್ಳಿ ಕಡೆ ಹೊರಟಿದ್ದು ದಾರಿಯ ಮಧ್ಯದಲ್ಲಿ ಇದ್ದ ಗೌರಿಬಿದನೂರು ನಗರ ಠಾಣೆಗೆ ಸಿಬ್ಬಂಧಿಗೆ ನಾನು ನಿಸ್ತಂತು ಮುಖಾಂತರ ವಿಷಯ ತಿಳಿಸಿದ್ದು ಅವರು ಆ ಕಾರನ್ನು ತಡೆಯಲು ಹೋದ ಪೋಲೀಸ್ ಪೇದೆ ಆಂಜನಪ್ಪ, ಹೆಚ್.ಸಿ. ಕೃಷ್ಣಮೂರ್ತಿ, ಡಬ್ಲ್ಯೂ.ಪಿ.ಸಿ. ಲಲಿತಮ್ಮರವರುಗಳ ಮೇಲೆ ಕಾರನ್ನು ನಿಲ್ಲಿಸದೇ ಹಾಯಿಸಿ ಪೇದೆ ಆಂಜನಪ್ಪರವರಿಗೆ ಕಾರು ಗುದ್ದಿದ ಪರಿಣಾಮ ಗಾಯವಾಗಿರುತ್ತದೆ, ಹಾಗೆ ಮುಂದೆ ಚಲಿಸಿದ ಕಾರು ಮಂಚೇನಹಳ್ಳಿ ಕಡೆ ಹೋಗುತ್ತಿದ್ದಾಗ ನಾನು ಮಂಚೇನಹಳ್ಳಿ ಠಾಣೆಗೆ ನಿಸ್ತಂತು ಮುಖಾಂತರ ವಿಷಯ ತಿಳಿಸಿದಾಗ ಮಂಚೇನಹಳ್ಳಿಯ ಪೋಲೀಸ್ ಸಿಬ್ಬಂಧಿ ಮತ್ತು ಸಾರ್ವಜನಿಕರು ಮಂಚೇನಹಳ್ಳಿಯಿಂದ ಗೌರಿಬಿದನೂರು ಮಾರ್ಗದಲ್ಲಿ ಕಾರನ್ನು ತಡೆಯಲು ಪ್ರಯತ್ನಿಸಿ ಕಾರನ್ನು ನಿಲ್ಲಿಸಿದಾಗ ಅದರಲ್ಲಿದ್ದ ಆಸಾಮಿಗಳು ಕಾರಿನಿಂದ ಇಳಿದು ತಪ್ಪಿಸಿಕೊಂಡು ಓಡಿಹೋಗಲು ಪ್ರಯತ್ನಿಸಿದಾಗ ನನ್ನ ಜೊತೆ ಇದ್ದ ಸಿಬ್ಬಂಧಿಗಳಾದ ಪೋಲೀಸ್ ಪೇದೆ ಪ್ರತಾಪ್‌ರವರು 2ನೇ ಆರೋಪಿಯಾದ ಮಣಿಮಾರನ್‌ನನ್ನು ಹಿಡಿಯಲು ಹೋದ ಸಮಯದಲ್ಲಿ ಆತನು ಸದರಿ ಪ್ರತಾಪ್‌ರನ್ನು ಚಾಕುವಿನಿಂದ ಚಾಕುವಿನಿಂದ 2 ಬಾರಿ ಹಲ್ಲೆ ನಡೆಸಿ ಗಾಯಗೊಳಿಸಿರುತ್ತಾನೆ. ನಾನು ಎಷ್ಟೇ ಎಚ್ಚರಿಕೆ ನೀಡಿದರೂ 2ನೇ ಆರೋಪಿಯು ಹಲ್ಲೆ ನಡೆಸುವುದನ್ನು ನಿಲ್ಲಿಸದಿದ್ದಾಗ ನಾನು ನನ್ನ ಸರ್ವೀಸ್ ರಿವಾಲ್ವರ್‌ನಿಂದ 2ನೇ ಆರೋಪಿಯ ಮೇಲೆ 2 ಬಾರಿ ಗುಂಡು ಹಾರಿಸಿ ಆತನನ್ನು ಗಾಯಪಡಿಸಿದಾಗ ಆತನು

ಚಾಕುವನ್ನು ಬಿಸಾಡಿರತ್ತಾನೆ. ನಂತರ ಸದರಿ ಪೊಲೀಸ್ ಪೇದೆ ಪ್ರತಾಪ್‌ರವರು 2ನೇ ಆರೋಪಿಯಾದ ಮಣಿಮಾರನ್‌ನನ್ನು ಬಂಧಿಸಿ ವಶಕ್ಕೆ ಪಡೆದಿರುತ್ತಾರೆ.

2) ಅದೇ ಸಮಯದಲ್ಲಿ ಹೆಚ್.ಸಿ. ವೆಂಕಟೇಶ್ 1ನೇ ಆರೋಪಿ ಪ್ರವೀಣ್‌ನನ್ನು ಹಿಡಿಯಲು ಹೆಲೋದ ಸಮಯಂಲ್ಲಿ 1ನೇ ಆರೋಪಿಯು ವೆಂಕಟೇಶ್ ರವರಿಗೆ ಬಟನ್ ಚಾಕುವಿನಿಂದ ಹಲ್ಲೆ ನಡೆಸಿ ಆತನ ಕೈಗೆ ಗಾಯಗೊಳಿಸಿದ್ದು ನಾನು ಎಷ್ಟೇ ಎಚ್ಚರಿಕೆ ನೀಡಿದರೂ 1ನೇ ಆರೋಪಿಯು ಹಲ್ಲೆ ನಡೆಸುವುದನ್ನು ನಿಲ್ಲಿಸದಿದ್ದಾಗ ನಾನು ನನ್ನ ಸರ್ವೀಸ್ ರಿವಾಲ್ವರ್‌ನಿಂದ 1ನೇ ಆರೋಪಿಯ ಮೇಲೆ 2 ಬಾರಿ ಗುಂಡು ಹಾರಿಸಿ ಆತನನ್ನು ಗಾಯಪಡಿಸಿದಾಗ ಆತನು ಚಾಕುವನ್ನು ಬಿಸಾಡಿರತ್ತಾನೆ. ನಂತರ ಸದರಿ ಹೆಚ್.ಸಿ. ವೆಂಕಟೇಶ್ ರವರು 1ನೇ ಆರೋಪಿಯಾದ ಪ್ರವೀಣ್‌ನನ್ನು ಬಂಧಿಸಿ ವಶಕ್ಕೆ ಪಡೆದಿರುತ್ತಾರೆ.

3) ಅದೇ ಸಮಯದಲ್ಲಿ ಕಾರಿನಲ್ಲಿದ್ದ 3ನೇ ಆರೋಪಿ ರವಿಯನ್ನು ಮಂಚೇನಹಳ್ಳಿ ಗ್ರಾಮಸ್ಥರು ಮತ್ತು ಪೊಲೀಸ್ ಸಿಬ್ಬಂಧಿಗಳು ಹಿಡಿದು ನಮ್ಮ ವಶಕ್ಕೆ ನೀಡಿರುತ್ತಾರೆ. ಗಾಯಗೊಂಡ ಆರೋಪಿಗಳನ್ನು ಮತ್ತು ಗಾಯಗೊಂಡ ನಮ್ಮ ಸಿಬ್ಬಂ ಧಿಗಳನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕಳುಹಿಸಿದ್ದು ಈ ಬಗ್ಗೆ ವಿವರವಾದ ಪಿರ್ಯಾದನ್ನು ತಯಾರಿಸಿ ಗೌರಿಬಿದನೂರಿನ ನಗರ ಠಾಣೆಯ ಎ.ಎಸ್.ಐ. ಸಂಜೀವನಾಯ್ಡುರವರಿಗೆ ಸಲ್ಲಿಸಿದ್ದು ಅವರು ಈ ಪ್ರಕರಣವನ್ನು ಮೊ.ಸಂಖ್ಯೆ.50/2002 ರಂತೆ ದಾಖಲಿಸಿಕೊಂಡಿರುತ್ತಾರೆ. ಆ ದಿನ ನಾನು ನೀಡಿದ ಪಿರ್ಯಾದಿನ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.9 ಎಂದು ಎಸ್.ಸಿ.288/2002 ರ ಪ್ರಕರಣದಲ್ಲಿ

ಗುರುತಿಸಲಾಗಿರುತ್ತದೆ. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ9(ಎ) ಎಂದು ಎಸ್.ಸಿ.288/2002ರಲ್ಲಿ ಗುರುತಿಸಲಾಗಿರುತ್ತದೆ. ಆ ಸಮಯದಲ್ಲಿ ನಾನು ವಶಪಡಿಸಿಕೊಂಡ ಫ್ಲೋಟೀಸ್ ಕಾರು, ಮಾರಕಾಸ್ತ್ರಗಳು ಮತ್ತು ಮ್ಯೂಸಿಕ್ ಸಿಸ್ಟಮ್ಸ್ ಮತ್ತು ನಗದು ಹಣವನ್ನು ಮೊ.ಸಂಖ್ಯೆ.49/2002 ರಲ್ಲಿ ವಶಪಡಿಸಿಕೊಂಡಿರುತ್ತೇನೆ. ನಾನು ಗೌರಿಬಿದನೂರು ನಗರ ಪೊಲೀಸ್ ಠಾಣೆಯ ತನಿಖಾಧಿಕಾರಿಗಳ ಮುಂದೆ ಮರುಹೇಳಿಕೆ ನೀಡಿರುತ್ತೇನೆ. ಆ ದಿನ ನೋಡಿದ ಆರೋಪಿಗಳನ್ನು ಮತ್ತು ಅವರು ಉಪಯೋಗಿಸಿದ ಆಯುಧಗಳನ್ನು ನೋಡಿದರೆ ಗುರ್ತಿಸುತ್ತೇನೆ.

<u>ಪಾಟೀಸವಾಲು: ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿನ ವಿಚಾರಣೆಯಾಗಿರುವುದರಿಂದ ಪಾಟೀ ಸವಾಲು ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ 29.09.2018 ರಂದು ಬೆರಳಚ್ಚು ನಕಲುಗಾರ್ತಿಯಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ ಕೇ ಸರಿ ಇದೆ

ಸಹಿ/-

(ಭಾನುಮತಿ.ಬಿ.ಸಿ.)
ಮೂರನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.